**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:11**

**ಎಸ್.ಸಿ. ಸಂಖ್ಯೆ: 10/2019 ಸಿಡಬ್ಲ್ಯೂ:8**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಶಿವರಾಮ ಪೂಜಾರಿ |
| **ತಂದೆ ಹೆಸರು** | : | ಗಿರಿಯ ಪೂಜಾರಿ |
| **ವಯಸ್ಸು** | : | 65 ವರ್ಷ |
| **ವೃತ್ತಿ** | : | ಖಾಸಗಿ ಕೆಲಸ |
| **ವಾಸ** | : | ಕಟ್‌ಬೆಲ್ತೂರು |

**ದಿನಾಂಕ: 12-11-2021 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಮೃತ ಗುಲಾಬಿ ಇವರ ಪರಿಚಯ ಇದೆ. ನಾನು ಅವರ ಹತ್ತಿರ ಮೀನು ಖರೀದಿಸುತ್ತಿದ್ದೆ. ಹೀಗಾಗಿ ಅವರ ಪರಿಚಯ ಇದೆ. ಕಟ್‌ಬೆಲ್ತೂರಿನ ವಿಜಯ ಗೇರುಬೀಜ ಫ್ಯಾಕ್ಟರಿ ಹತ್ತಿರ ಅವರ ಮನೆ ಇದೆ. ಮನೆಯಲ್ಲಿ ಅವರು ಒಬ್ಬರೇ ಇರುತ್ತಿದ್ದರು.

ದಿನಾಂಕ 01-03-2019 ರಂದು ನಾನು ಬೆಳಿಗ್ಗೆ 10.30 ಯಿಂದ 11.00 ಗಂಟೆ ಸಮಯದಲ್ಲಿ ಗುಲಾಬಿ ಇವರ ಮನೆಗೆ ಮೀನು ಖರೀದಿಸಲು ಹೋಗಿದ್ದೆನು. ಮನೆಯ ಹತ್ತಿರ ಹೋಗಿ ಅವರನ್ನು ಕೂಗಿ ಕರೆದಿದ್ದು ಅವರು ಬಾಗಿಲು ತೆರೆಯಲಿಲ್ಲ. ಆಗ ನಾನು ಅವರ ಮನೆಯ ಕಿಟಕಿಯಿಂದ ನೋಡಲಾಗಿ ಅವರು ಒಳಗಡೆ ಬಿದ್ದಿದ್ದರು. ಕೂಡಲೇ ನಾನು ಗುಲಾಬಿ ಇವರ ತಂಗಿ ಜಲಜ (ಚಾಸಾ-9) ಇವರಿಗೆ ಫೋನ್ ಮಾಡಿರುತ್ತೇನೆ. ನಂತರ ಜಲಜ ಹಾಗೂ ಉದಯ ಎನ್ನುವವರು ಅಲ್ಲಿಗೆ ಬಂದಿರುತ್ತಾರೆ.

ನಂತರ ನಾವು ಎಲ್ಲರೂ ಮನೆಯ ಒಳಗಡೆ ಹೋಗಿರುತ್ತೇವೆ. ಅವರ ಕುತ್ತಿಗೆಯ ಹತ್ತಿರ ಗಾಯವಾಗಿತ್ತು. ಅವರು ಮೃತಪಟ್ಟಿದ್ದರು. ಅವರ ಕೊರಳಿನಲ್ಲಿ ಇದ್ದ ಚಿನ್ನದ ಸರ, ಬೆಂಡೋಲೆ, ಉಂಗುರ ಇರಲಿಲ್ಲ. ನಾನು ಮೀನು ಖರೀದಿಸಲು ಹೋದಾಗ ಅವರ ಮೈಮೇಲಿನ ಚಿನ್ನದ ಆಭರಣಗಳನ್ನು ನೋಡುತ್ತಿದ್ದೆನು. ಅವುಗಳನ್ನು ನೋಡಿದರೆ

ಎಸ್.ಸಿ. ಸಂಖ್ಯೆ: 10/2019
ಪಿಡಬ್ಲ್ಯೂ:11
ಸಿಡಬ್ಲ್ಯೂ:8

ಗುರುತಿಸುತ್ತೇನೆ. ಈಗ ನೋಡುತ್ತಿರುವ ಚಿನ್ನದ ಸರ, ಬೆಂಡೋಲೆ, ಉಂಗುರ (ಮು.ಮಾ-1 ರಿಂದ 3) ಗುಲಾಬಿ ಇವರಿಗೆ ಸೇರಿದ್ದು ಇವೆ.

ನಂತರ ಅವರು ಪೊಲೀಸರಿಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಪೊಲೀಸರು ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿರುತ್ತಾರೆ. ಗುಲಾಬಿ ಈಕೆಯನ್ನು ಉಸಿರುಗಟ್ಟಿಸಿ ಸಾಯಿಸಲಾಗಿದೆ ಎಂದು ನಂತರ ಗೊತ್ತಾಯಿತು. ನ್ಯಾಯಾಲಯದಲ್ಲಿರುವ ಆರೋಪಿಯನ್ನು ಗೇರುಬೀಜ ಫ್ಯಾಕ್ಟರಿ ಹತ್ತಿರ ತಿರುಗಾಡುವುದನ್ನು ನಾನು ನೋಡಿರುತ್ತೇನೆ. ಪೊಲೀಸರು ನನ್ನನ್ನು ವಿಚಾರಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ನನ್ನ ಮನೆಯಿಂದ ಮೃತ ಗುಲಾಬಿ ಇವರ ಮನೆ ಎರಡೂವರೆ ಕಿಮೀ. ದೂರ ಇದೆ. ಗುಲಾಬಿ ಇವರು ಮೃತಪಡುವ 5 – 6 ವರ್ಷಗಳ ಹಿಂದಿನಿಂದ ಅವರ ಪರಿಚಯ ಇದೆ. ಗುಲಾಬಿ ಇವರು ಹೆಮ್ಮಾಡಿ ಮೀನು ಮಾರುಕಟ್ಟೆಯಲ್ಲಿ ಮೀನು ಮಾರುತ್ತಿದ್ದರು. ನಾನು ಹೆಮ್ಮಾಡಿ ಮೀನು ಮಾರುಕಟ್ಟೆಗೆ ತಿಂಗಳಿನಲ್ಲಿ ಒಂದು ಅಥವಾ ಎರಡು ಬಾರಿ ಮೀನು ಖರೀದಿಸಲು ಹೋಗುತ್ತಿದ್ದೆ. ಮಾರುಕಟ್ಟೆಯಲ್ಲಿ 3 – 4 ಜನರು ಮೀನು ಮಾರಾಟ ಮಾಡುತ್ತಿರುತ್ತಾರೆ. ಮೀನು ಮಾರುಕಟ್ಟೆಯಿಂದ ಗುಲಾಬಿ ಇವರ ಮನೆ 1 ಕಿಮೀ. ದೂರ ಇದೆ. ಗುಲಾಬಿ ಮೃತಪಡುವ 3 – 4 ದಿನ ಮೊದಲು ನಾನು ಹೆಮ್ಮಾಡಿ ಮೀನು ಮಾರುಕಟ್ಟೆಗೆ ಮೀನು ತರಲು ಹೋಗಿದ್ದೆನು. ನಾನು ಬೇರೆಯವರ ಹತ್ತಿರ ಮೀನು ಖರೀಸುತ್ತಿದ್ದೆನು ಆದರೆ ಅವರ ಹೆಸರು ನೆನಪಿಲ್ಲ. ಮೀನು ಮಾರಾಟ ಮಾಡುವವರ ಮೈಮೇಲೆ ಕರಿಮಣಿ ಸರ, ಚಿನ್ನದ ಸರ ಹಾಗೂ ಇತರ ಆಭರಣಗಳು ಇರುತ್ತಿದ್ದವು.

ಗುಲಾಬಿ ಇವರು ನನಗೆ ದಿನಾಂಕ 28-02-2019 ರಂದು ಸಾಯಂಕಾಲ 8 ಗಂಟೆಗೆ ಸಿಕ್ಕಿದ್ದರು. ಆ ದಿನ ಸಾಯಂಕಾಲ ನನಗೆ ಬೇರೆ ಯಾರೂ ಭೇಟಿಯಾಗಿರುವುದಿಲ್ಲ. ಗುಲಾಬಿ ಇವರನ್ನು ಭೇಟಿಯಾದಾಗ ಯಾವ ಸೀರೆ ಉಟ್ಟುಕೊಂಡಿದ್ದರು ಎಂದು ನೆನಪಿಲ್ಲ. ಆ

ಸಮಯದಲ್ಲಿ ಅವರ ಮೈಮೇಲೆ ಚಿನ್ನದ ಬೆಳ್ಳಿಯ ಯಾವ ಯಾವ ಆಭರಣಗಳು ಇದ್ದವು ಎಂದು ನಾನು ನೋಡಿಲ್ಲ. ಮೀನು ಮಾರಾಟ ಮಾಡುವವರ ಮೈಮೇಲೆ ಯಾವ ಯಾವ ಆಭರಣಗಳು ಇವೆ ಎನ್ನುವುದನ್ನು ನಾನು ನೋಡಲು ಹೋಗಿಲ್ಲ.

ನಾನು ಗುಲಾಬಿ ಇವರ ಮನೆಗೆ ಹೋಗಿದ್ದು ಶುಕ್ರವಾರದಂದು. ನಾನು ಗುಲಾಬಿ ಇವರನ್ನು ನೋಡುವಾಗ ಅವರ ಮೈಮೇಲಿದ್ದ ಆಭರಣಗಳನ್ನು ನೋಡಿದ್ದೇನೆ ಎನ್ನುವ ವಿಷಯವನ್ನು ಪೊಲೀಸರ ವಿಚಾರಣೆ ಸಮಯದಲ್ಲಿ ತಿಳಿಸಿದ್ದೇನೆ. ನಾನು ಗುಲಾಬಿ ಇವರ ಮನೆ ಹತ್ತಿರ ಬೆಳಿಗ್ಗೆ **10.30** ರಿಂದ **11.00** ವರೆಗೆ ಇದ್ದೆ. ನಾನು ಗುಲಾಬಿ ಇವರನ್ನು ಕೂಗಿ ಕರೆದಿರುತ್ತೇನೆ. ಆದರೆ ಬಾಗಿಲನ್ನು ದೂಡಿರುವುದಿಲ್ಲ. ಗುಲಾಬಿ ಇವರು ಆ ದಿನ ಯಾವ ಬಣ್ಣದ ಸೀರೆ ಧರಿಸಿದ್ದರು ಎಂದು ನಾನು ನೋಡಿಲ್ಲ.

ಗುಲಾಬಿ ಇವರ ಕಾಲು ಪೂರ್ವದ ದಿಕ್ಕಿನಲ್ಲಿ ಇದ್ದವು. ನಾನು ಗುಲಾಬಿ ಇವರನ್ನು ಕಿಟಕಿಯ ಮೂಲಕ ನೋಡಿದ ಕೂಡಲೇ ಸುತ್ತಮುತ್ತಲಿನ ಜನರನ್ನು ಕರೆದಿರುವುದಿಲ್ಲ. ಗುಲಾಬಿ ಇವರು ನನಗೆ ಆತ್ಮೀಯರು ಇರುವುದಿಲ್ಲ. ನಾನು ಅವರ ಮನೆಯ ಒಳಗಡೆ ಹೋಗಿ ನೋಡಲಾಗಿ ಗುಲಾಬಿ ಇವರ ಮೈಮೇಲೆ ಯಾವುದೇ ಆಭರಣಗಳು ಇರಲಿಲ್ಲ. ಗುಲಾಬಿ ಇವರು ಬಿದ್ದ ಸ್ಥಳದ ಹತ್ತಿರ ರಕ್ತದ ಕಲೆಗಳನ್ನು ನಾನು ನೋಡಿಲ್ಲ. ಗುಲಾಬಿ ಎಡಮಗ್ಗಲು ಹೊರಳಿ ಬಿದ್ದಿದ್ದರು. ಮನೆಯ ಒಳಗಡೆ ಹೋದಾಗ ಒಳಗಡೆಯ ವಸ್ತುಗಳು ಅಸ್ತವ್ಯಸ್ತವಾಗಿರುವುದನ್ನು ನಾನು ಗಮನಿಸಿಲ್ಲ.

ಪೊಲೀಸರು ಮಧ್ಯಾಹ್ನ **12.00** ರಿಂದ **12.30** ರ ಅವಧಿಯಲ್ಲಿ ಗುಲಾಬಿ ಇವರ ಮನೆ ಹತ್ತಿರ ಬಂದಿರುತ್ತಾರೆ. ಆಗ ನಾನು ಅಲ್ಲಿ ಇದ್ದೆ. ಪೊಲೀಸರು ಶವ ಮಹಜರು ಮಾಡಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆ ಸ್ಥಳಕ್ಕೆ ಸಹಾಯ ಆಯುಕ್ತರು ಬಂದಿದ್ದರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆ ದಿನ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನಾನು ಹೇಳಿಕೆ ನೀಡಿರುವುದಿಲ್ಲ. ಮನೆಯ ಒಳಗಡೆ ನಾನು, ಮೃತ ಗುಲಾಬಿಯ ಇಬ್ಬರು ಮಕ್ಕಳಾದ ರಾಜು, ನಟರಾಜ, ಜಲಜ **(ಚಾಸಾ-9),**

**ಎಸ್.ಸಿ. ಸಂಖ್ಯೆಃ 10/2019**
**ಪಿಡಬ್ಲ್ಯೂಃ11**
**ಸಿಡಬ್ಲ್ಯೂಃ8**

ಉದಯ ಹೋಗಿರುತ್ತೇವೆ. ಗುಲಾಬಿ ಇವರ ಮೃತದೇಹವನ್ನು ಪೊಲೀಸರು ತೆಗೆದುಕೊಂಡು ಹೋಗುವಾಗ ಅವರ ಮನೆಯ ಹೊರಗಡೆ ನಿಂತಿದ್ದೆನು. ಆ ಸಮಯದಲ್ಲಿ ಗುಲಾಬಿಯ ಮೈಮೇಲೆ ಚಿನ್ನದ ಸರ, ಬೆಂಡೋಲೆ, ಉಂಗುರ ಇಲ್ಲದಿರುವ ಬಗ್ಗೆ ಗುಲಾಬಿಯ ಇಬ್ಬರು ಮಕ್ಕಳಾದ ರಾಜು, ನಟರಾಜ, ಜಲಜ (ಚಾಸಾ-9), ಉದಯ ಇವರಿಗೆ ತಿಳಿಸಿರುವುದಿಲ್ಲ. ಮೃತ ಗುಲಾಬಿಯನ್ನು ನೋಡಿದಾಗ ನನಗೆ ಅವಳ ಕೊಲೆಯಾಗಿದೆ ಎಂದು ಗುಮಾನಿ ಬರಲಿಲ್ಲ. ಗುಲಾಬಿ ಇವರ ಮೈಮೇಲಿದ್ದ ಆಭರಣಗಳ ಕುರಿತು ಪೊಲೀಸರಿಗೆ ತಿಳಿಸಬೇಕು ಎಂದು ನನಗೆ ಅನಿಸಿರುವುದಿಲ್ಲ.

ಮಹಜರು ಮಾಡುವ ಸಮಯದಲ್ಲಿ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು. ಇದನ್ನು ಬಿಟ್ಟು ಪೊಲೀಸರು ನನ್ನನ್ನು ಕರೆಯಿಸಿರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ನಾನು ಯಾವುದೇ ಫಾರ್ಮಗೆ ಸಹಿ ಮಾಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿವರಣೆಯನ್ನು ಇದಕ್ಕೂ ಮೊದಲು ಯಾರ ಮುಂದೆಯೂ ಹೇಳಿಲ್ಲ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎನ್ನುವುದು ನಿಜ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**